ಅಲ್ಲಿ ಯೋಗ್ಯವಾದುವೂ ಇವೆ, ದೋಷಗಳೂ ಇವೆ. ಸಂನ್ಯಾಸಿಗಳು ಮತ್ತು ಗೃಹಸ್ಥರ ಮಧ್ಯೆ ಪರಿಪೂರ್ಣ ಸಾಮರಸ್ಯ ಇರಬೇಕು. ಆದರೆ ಸಂನ್ಯಾಸಧರ್ಮವು ಭಾರತದ ಶಕ್ತಿಯನ್ನೆಲ್ಲಾ ಹೀರಿ ಕೊಂಡಿರುವುದಂತೂ ನಿಜ... ಸಂನ್ಯಾಸಿಗಳೇ ಜನಾಂಗದ ಜೀವಾಳ ವಾದರೂ, ಒಳ್ಳೆಯವರ ಕೈಯಲ್ಲೇ ಆದರೂ, ಇಷ್ಟು ಶಕ್ತಿ ಇರುವುದು ಒಳ್ಳೆಯದಲ್ಲ. ಸಂನ್ಯಾಸಿಗಳು ಪುರೋಹಿತಶಾಹಿ ಮತ್ತು ನೈಜ ಜ್ಞಾನ – ಇವುಗಳ ಮಧ್ಯದಲ್ಲಿ ನಿಲ್ಲುವರು. ಜ್ಞಾನ ಮತ್ತು ಸುಧಾರಣೆಗಳ ಕೇಂದ್ರವೇ ಅವರು... ಆದರೂ ಅವರಿಗೆ ಅಷ್ಟೊಂದು ಅಧಿಕಾರವಿರುವುದು ತಪ್ಪು. ಇದಕ್ಕಿಂತಲೂ ಉತ್ತಮ ವಿಧಾನಗಳನ್ನು ಕಂಡುಹಿಡಿಯಬೇಕು... ನಮಗೆ ಏನು ಮಾಡಲು ಸಾಧ್ಯವೆಂದರೆ, ಇದನ್ನು ಬದಲಾಯಿಸುವುದು, ಇದಕ್ಕೆ ಬೇರೊಂದು ರೂಪವನ್ನು ಕೊಡುವುದು. ಅಲೆಯುತ್ತಿರುವ ಭಾರತದ ಸಂನ್ಯಾಸಿಗಳು ತಮ್ಮ ಕೈಯಲ್ಲಿರುವ ಇಷ್ಟು ಅದ್ಭುತವಾದ ಶಕ್ತಿ ಯನ್ನು ಮಾರ್ಪಡಿಸಬೇಕು. ಆಗ ಅದು ಜನಸಾಮಾನ್ಯರನ್ನು ಮೇಲಕ್ಕೆತ್ತುವುದು."

ಈ ಮಾತುಗಳಲ್ಲಿ ತೋರಿಕೆಗೆ ವಿರೋಧಾಭಾಸ ಇರುವಂತೆ ಕಂಡುಬಂದರೂ, ಸೂಕ್ಷ್ಮವಾಗಿ ಗಮನಿಸಿದಾಗ, ಗೃಹಸ್ಥರ ಮತ್ತು ಸಂನ್ಯಾಸಿಗಳ ನಡುವಿನ ತಮ್ಮ ಪಕ್ಷಾತೀತ ಭಾವನೆಯಲ್ಲಿಯೂ ಸ್ವಾಮೀಜಿ ಮಹಾನತೆಯನ್ನೇ ಮೆರೆದಿರುವುದು ಸ್ಪಷ್ಟವಾಗುತ್ತದೆ.

## ಸಮನ್ವಯಮೂರ್ತಿಯಾಗಿ ಶ್ರೀರಾಮಕೃಷ್ಣರು

ಶ್ರೀರಾಮಕೃಷ್ಣರು ತಮ್ಮ ಪ್ರತಿಯೊಬ್ಬ ಸಂನ್ಯಾಸಿ ಶಿಷ್ಯರ ಮೂಲಕವೂ, ಸಾಮರಸ್ಯದ ಆದರ್ಶವನ್ನು ವ್ಯಕ್ತಗೊಳಿಸಲು ಬಯಸಿದ್ದರು. ತಮ್ಮ ಶಿಷ್ಯರನ್ನು ಅವರವರ ಸಹಜ ಮನೋ ಧರ್ಮಕ್ಕೆ ಅನುಗುಣವಾಗಿ, ಕಾಲಕಳೆದಂತೆ ವ್ಯಕ್ತಪಡಿಸುವ ಸಲುವಾಗಿ, ಸಂನ್ಯಾಸಧರ್ಮದ ವಿವಿಧ ಅಂಶಗಳ ಬಗ್ಗೆ ಬೇರೆ ಬೇರೆ ರೀತಿಯ ತರಬೇತಿಯನ್ನು ನೀಡಿದರು. ನಿಸ್ವಾರ್ಥತೆ, ತಪಸ್ಸು, ಶಿಸ್ತುಪಾಲನೆ ಮುಂತಾದ ಸಮಾನ ಗುಣಗಳನ್ನು ಅವರ ಎಲ್ಲ ಸಂನ್ಯಾಸಿ ಶಿಷ್ಯರಲ್ಲಿಯೂ ನೋಡಬಹುದು.

ಹಾಗೆಯೇ ಒಬ್ಬೊಬ್ಬರಿಗೇ ವಿಶಿಷ್ಟವಾದ ಕೆಲವು ಗುಣಗಳನ್ನೂ ಕಾಣಬಹುದು. ಉದಾಹರಣೆಗೆ, ಶ್ರೀರಾಮಕೃಷ್ಣರು ಸ್ವಾಮಿ ಬ್ರಹ್ಮಾನಂದರಿಗೆ 'ನಾಯಕತ್ವ'ದ ಗುಣದಲ್ಲಿ ತರಬೇತಿ ನೀಡಿದರು. ಸ್ವಾಮಿ ಪ್ರೇಮಾನಂದರನ್ನು ಅಪಾರ ಪ್ರೇಮಭಾವನೆಯಲ್ಲಿಯೂ, ಸ್ವಾಮಿ ರಾಮಕೃಷ್ಣಾನಂದರನ್ನು ನಿಷ್ಠಾಪೂರ್ವಕ ಭಕ್ತಿಯಲ್ಲಿಯೂ, ಸ್ವಾಮಿ ಅಖಂಡಾನಂದರನ್ನು ಮಾನವನಲ್ಲಿರುವ ಭಗವಂತನ ಸೇವಾ ವಿಧಾನದಲ್ಲಿಯೂ, ಸ್ವಾಮಿ ತುರೀಯಾನಂದರನ್ನು ಅದ್ವೈತ ವೇದಾಂತವನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದ ರಲ್ಲಿಯೂ, ಸ್ವಾಮಿ ಅಭೇದಾನಂದರನ್ನು ಯೋಗಶಾಸ್ತ್ರದ ಪರಿಣತಿಯೊಂದಿಗೆ ಶಾಸ್ತ್ರಜ್ಞಾನದಲ್ಲಿಯೂ, ಸ್ವಾಮಿ ಅದ್ಭುತಾ ನಂದರನ್ನು ಶರಣಾಗತಿ ಮತ್ತು ಸೇವಾಮನೋಭಾವದಲ್ಲಿಯೂ ಶ್ರೀರಾಮಕೃಷ್ಣರು ವಿಶೇಷವಾದ ಶಿಕ್ಷಣವನ್ನು ಕೊಟ್ಟರು. ಇತರ ಸಾಕ್ಷಾತ್ ಶಿಷ್ಯರ ವಿಷಯದಲ್ಲೂ ಅವರು ಇದೇ ವಿಧಾನವನ್ನೇ ಅನುಸರಿಸಿರುವುದನ್ನು ಕಾಣುತ್ತೇವೆ.

ಹೀಗೆ ಶ್ರೀರಾಮಕೃಷ್ಣರು ಸಂಸ್ಥಾಪಿಸಿದ ಈ ಮಹಾಸಂಘವು ತಪಸ್ಸು, ಶಾಸ್ತ್ರಾಧ್ಯಯನ, ಭಕ್ತಿಭಾವ, ಕರ್ಮಯೋಗ ಮತ್ತು ಮಾನವನಲ್ಲಿ ಭಗವಂತನ ಸೇವೆ – ಈ ಉದಾತ್ತ ಗುಣಗಳ ಸುಮಧುರ ಸಮನ್ವಯ ಕೇಂದ್ರವಾಗಿದೆ. ಶ್ರೀರಾಮಕೃಷ್ಣರೇ ಈ ಎಲ್ಲ ದೈವೀಗುಣಗಳ ಸಾಕಾರಮೂರ್ತಿಯೂ ಆಗಿದ್ದಾರೆ. ಹೀಗಾಗಿ ಅವರನ್ನು ಸಮನ್ವಯಮೂರ್ತಿಯೆಂದು ಕರೆಯುತ್ತೇವೆ. ಅವರೇ ಹುಟ್ಟಿಹಾಕಿದ ಈ ಮಹಾಸಂಘವು ಆಧುನಿಕ ವೈಜ್ಞಾನಿಕ ಪ್ರಗತಿ ಮತ್ತು ಜನಹಿತಕ್ಕಾಗಿ ಅದರ ಅವಳವಡಿಕೆಗೆ ಮಹತ್ವ ನೀಡುತ್ತದೆ. ಅದೇ ಸಮಯದಲ್ಲಿ, ಈ ಸಂಘಕ್ಕೆ ಸೇರಿದ ಸಂನ್ಯಾಸಿಗಳು ಪ್ರಾಪಂಚಿಕತೆಯಿಂದ ಬಳಲುತ್ತಿರುವ ಜನರಿಗೆ ಆಧ್ಯಾತ್ಮಿಕತೆಯ ಬೆಳಕನ್ನೂ ನೀಡುತ್ತಾರೆ. ಹೀಗೆ ಈ ಸಂಘವು ಜ್ಞಾನ, ಭಕ್ತಿ, ಕರ್ಮ ಮತ್ತು ಧ್ಯಾನಗಳ ಸಮನ್ವಯದ ಅಭಿವ್ಯಕ್ತಿ ಯಾಗಿದೆ.

ಆದರೆ ರಾಮಕೃಷ್ಣ ಮಹಾಸಂಘದ ಬಗ್ಗೆ ಇಷ್ಟು ಮಾತ್ರ ಹೇಳಿದರೆ, ಎಲ್ಲವನ್ನೂ ಹೇಳಿದಂತಾಗುವುದಿಲ್ಲ. ಹಾಗೆ ನೋಡಿ ದರೆ, ಶ್ರೀರಾಮಕೃಷ್ಣರು ನೂತನ ಸಂನ್ಯಾಸಿ ಪಂಥವೊಂದನ್ನು ಸೃಷ್ಟಿಸಲು ಮಾತ್ರವೇ ಜನ್ಮತಳೆಯಲಿಲ್ಲ. ಅವರು ಪ್ರಾಪಂಚಿಕ ಜನರ ಉದ್ಧಾರಕ್ಕಾಗಿ ಅವತಾರವೆತ್ತಿಬಂದರು.

ರಾಮಕೃಷ್ಣ ಆಂದೋಲನವೆಂದರೆ ಅದು ಗೃಹಸ್ಥರ ಮತ್ತು ಸಂನ್ಯಾಸಿಗಳ ಸಂಯುಕ್ತ ಒಕ್ಕೂಟ. ರಾಮಕೃಷ್ಣ ಆಂದೋಳನದ ಹೆಸರಿನಡಿ, ಜನರು ಸಣ್ಣ ಸಣ್ಣ ಗುಂಪುಗಳಲ್ಲಿ ಕೆಲಸಮಾಡಬೇಕೆಂದು ಸ್ವಾಮಿ ವಿವೇಕಾನಂದರು ಇಚ್ಛೆಪಟ್ಟಿದ್ದರು. ಆದರೆ ಅಂತಹ ಜನರು ತಮ್ಮ ವೈಯಕ್ತಿಕ ಘನತೆಯನ್ನಾಗಲಿ, ವೈಶಿಷ್ಟ್ಯವನ್ನಾಗಲಿ ಕಳೆದುಕೊಳ್ಳಬಾರದು ಎನ್ನುವುದೇ ಅವರ ನಿಲುವಾಗಿತ್ತು. ಈ ಭಾವನೆಯನ್ನು ಅವರು ಶ್ರೀಮತಿ ಬುಲ್ ಅವರಿಗೆ ಬರೆದ ಒಂದು ಪತ್ರದಲ್ಲಿ, ಸ್ವಾಮೀಜಿ ಹೀಗೆ ವ್ಯಕ್ತಪಡಿಸುತ್ತಾರೆ: "ನನ್ನ ಯೋಜನೆ ಎಂದರೆ, ತಾನೇತಾನಾಗಿ ಕೆಲಸಮಾಡುವ, ಸ್ವತಂತ್ರವಾದ ಗುಂಪುಗಳನ್ನು ವಿವಿಧ ಸ್ಥಳಗಳಲ್ಲಿ ಹುಟ್ಟುಹಾಕುವುದು. ಅವರು ತಮ್ಮ ಪಾಡಿಗೆ, ಕೈಲಾದಷ್ಟು ಕೆಲಸಮಾಡಲಿ."

ಈ ಬಗೆಯ ವಿಧಾನದಿಂದ, ಗೃಹಸ್ಥರೂ ಕೂಡ ಸಾಮಾನ್ಯ ಜನರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಶಕ್ಯರಾಗುತ್ತಾರೆ. ಅಂಥ ಸೇವಾವ್ರತಿಗಳು ಕಾಲಕಾಲಕ್ಕೆ ಸಂನ್ಯಾಸಿಗಳ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಬಹುದು. ಹಾಗೆಂದು ಅವರು ಮೂಲಸಂಸ್ಥೆಯ ಅಡಿಯಾಳುಗಳಾಗಿರಬೇಕಾಗಿಲ್ಲ.


ರಾಮಕೃಷ್ಣ ಮಹಾಸಂಘದ ಸದಸ್ಯರು ವಿವಿಧ ಅಭಿಪ್ರಾಯ ಗಳನ್ನು ಹೊಂದಿರಬಹುದು. ಆದರೆ ಇಲ್ಲಿ ಭಿನ್ನಮತ, ಪಕ್ಷಪಾತ, ಸ್ವಾರ್ಥ, ಹೆಸರು ಕೀರ್ತಿಗಳಿಗಾಗಿ ಆಸೆ, ಇನ್ನೊಬ್ಬರನ್ನು ತುಳಿದು ಮುಂದಕ್ಕೆ ಹೋಗುವುದು ಮುಂತಾದ ಪ್ರಾಪಂಚಿಕತೆಯ ದೋಷ ಗಳಾವುದಕ್ಕೂ ಆಸ್ಪದ ಇರುವುದಿಲ್ಲ. ಎಲ್ಲಿಯವರೆಗೆ ಮಹಾಸಂಘವು ಈ ಆದರ್ಶವನ್ನು ಪರಿಪಾಲನೆ ಮಾಡಿಕೊಂಡು ಬರುವುದೋ, ಅಲ್ಲಿಯವರೆಗೆ ಅದು ತನ್ನದೇ ಆದ ಮಹಾನತೆಯೊಂದಿಗೆ, ಹಿಂದೆಂದಿಗಿಂತಲೂ ಹೆಚ್ಚು ಪುನಶ್ಚೇತನಗೊಂಡು ತಲೆಯೆತ್ತಿ ನಿಲ್ಲುವುದು.


ವಿಷ್ಣು ಭವನ್
ಸ್ವೀಟ್ಸ್ (SM)
ಸ್ವೀಟ್ಸ್, ಖಾರಾ, ಸಸ್ಯಾಹಾರಿ ಫ್ಯಾಮಿಲಿ ರೆಸ್ಟೋರೆಂಟ್ಸ್
ಇದು ಹೋಟೆಲ್ ವಿಷ್ಣು ಭವನ್ ಮೈಸೂರು ರವರ ಒಂದು ಘಟಕ
No gift could be sweeter!
Vishnu Bhavan
SWEETS (SM)
SWEETS, SAVOURIES VEG FAMILY RESTAURANTS
A Unit of Hotel Vishnu Bhavan Group of Hotels, Mysore
MYSORE
• B.N. Road, Opp. KSRTC Bus Stand 2440110, 2430132
• Nrupathunga Road, Kuvempunagar 2462700, 2463700
• Irwin Road, Near Head Post Office 2445677
• Chamaraja Double Road 2433110
• Gokulam 2515301
• Kalidasa Road (Bulk Sweet Orders only) 2410637, 9481529200
E.mail : cnghvb@gmail.com / vbsweets2001@gmail.com
www.hotelvishnubhavan.com
www.vishnubhavansweets.com

# ಸ್ವಾಮಿ ವಿವೇಕಾನಂದರ ಶೈಕ್ಷಣಿಕ ತತ್ತ್ವ

ಸ್ವಾಮಿ ಮುಕ್ತಿದಾನಂದ

ನಾಗರಿಕತೆ ಬೆಳೆದಂತೆ ಶಿಕ್ಷಣವು ಮಾನವ ಜೀವಿತದ ಪ್ರಮುಖ ಅಂಗವಾಗಿ ಹೊರಹೊಮ್ಮುತ್ತಲಿದೆ. ಅನೇಕ ಮಹಾನ್ ಚಿಂತಕರು ಶಿಕ್ಷಣದ ಬಗ್ಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಇವರಲ್ಲಿ ವಿಶಿಷ್ಟವಾಗಿ ಎದ್ದುನಿಲ್ಲುವವರೆಂದರೆ ಸ್ವಾಮಿ ವಿವೇಕಾನಂದರು. ಭಾರತೀಯ ಆಧ್ಯಾತ್ಮಿಕತೆ ಮತ್ತು ಸಂಸ್ಕೃತಿಗಳ ಪ್ರಭಾವದಿಂದ ಮೂಡಿಬಂದ ಅವರ ಶೈಕ್ಷಣಿಕ ತತ್ತ್ವದ ಜಿಜ್ಞಾಸೆಯನ್ನು ವಿದ್ವತ್ಪೂರ್ಣವಾಗಿ ಮಾಡಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು. ಸ್ವಾಮೀಜಿಯವರು ಶೈಕ್ಷಣಿಕ ವಿಷಯಗಳಲ್ಲಿ ಅಪಾರ ಅನುಭವವನ್ನು ಹೊಂದಿದ್ದಾರೆ. ಇವರು ಉತ್ತಮ ವಾಗ್ಮಿಗಳು ಹಾಗೂ ಸಂಘಟಕರು.





## ಶೈಕ್ಷಣಿಕ ಇತಿಹಾಸದ ಸಂಕ್ಷಿಪ್ತ ಇತಿಹಾಸ

ಪಾಶ್ಚಾತ್ಯ ಜಗತ್ತಿನಲ್ಲಿ ಪ್ಲೇಟೋವಿನಿಂದ ಹಿಡಿದು ಜಾನ್ ಡ್ಯೂಯಿಯವರೆಗೆ ಅನೇಕ ತತ್ತ್ವಶಾಸ್ತ್ರಜ್ಞರು ಶಿಕ್ಷಣದ ವಿವಿಧ ಧ್ಯೇಯಗಳು ಮತ್ತು ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಸ್ವಾಮಿ ವಿವೇಕಾನಂದರ ಮಾನವ ನಿರ್ಮಾಣ ಶಿಕ್ಷಣದ ಮಹತ್ವ, ವೈಶಿಷ್ಟ್ಯತೆ ಮತ್ತು ಪ್ರಾಮುಖ್ಯತೆಗಳನ್ನು ಇನ್ನಿತರ ಶೈಕ್ಷಣಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಮಾತ್ರವೇ ಸರಿಯಾಗಿ ಮೌಲ್ಯಮಾಪನ ಮಾಡಬಹುದಾಗಿದೆ. ಆ ಸಿದ್ಧಾಂತಗಳು ಪ್ರಾಚೀನ ಭಾರತದ್ದಾಗಿರಬಹುದು ಅಥವಾ ಪ್ರಪಂಚದ ಇನ್ನಿತರ ಭಾಗಗಳ ಶಿಕ್ಷಣತಜ್ಞರು ಪ್ರತಿಪಾದಿಸಿದ್ದಾಗಿರಲೂಬಹುದು.

## ಪ್ರಾಚೀನ ಭಾರತದಲ್ಲಿ ಶಿಕ್ಷಣ

ಪ್ರಾಚೀನ ಭಾರತವು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿತ್ತು ಎಂದು ಯಾವ ಉತ್ಪ್ರೇಕ್ಷೆಯೂ ಇಲ್ಲದೆ ಹೇಳಬಹುದು. ವೈದಿಕ ಕಾಲದಲ್ಲಿ ಭಾರತವು ವಿಶಿಷ್ಟ ರೀತಿಯ ಶಿಕ್ಷಣ ಪದ್ಧತಿಯನ್ನು ಅಭಿವೃದ್ಧಿಪಡಿಸಿತ್ತು. ಅದನ್ನು ಗುರುಕುಲ ಶಿಕ್ಷಣ ಪದ್ಧತಿ ಎಂದು ಕರೆಯುತ್ತಾರೆ. ಹಳೆಯ ಸಂಸ್ಕೃತ ಗ್ರಂಥಗಳಲ್ಲಿ ಪ್ರಾಚೀನ ಭಾರತೀಯ ವಿದ್ಯಾಭ್ಯಾಸ ಪದ್ಧತಿಯ ಆದರ್ಶಗಳ ಬಗ್ಗೆ ಹಲವಾರು ಉಲ್ಲೇಖಗಳನ್ನು ನಾವು ನೋಡಬಹುದು. ಲೌಕಿಕ ಜೀವನಕ್ಕೆ ಬೇಕಾದ ವಿದ್ಯೆಯನ್ನು 'ಅಪರಾ ವಿದ್ಯೆ' ಎಂದು ಆ ಕಾಲದಲ್ಲಿ ಕರೆಯುತ್ತಿದ್ದರು. ಪರಿಪೂರ್ಣತೆ ಅಥವಾ ಉನ್ನತ ಜ್ಞಾನವನ್ನು ತಂದುಕೊಡುವ ವಿದ್ಯೆಯನ್ನು 'ಪರಾ ವಿದ್ಯೆ' ಎಂದು ಕರೆಯುತ್ತಿದ್ದರು.

ನಮ್ಮ ದೇಶದಲ್ಲಿ ಹಿಂದಿನಿಂದಲೂ 'ಪರಾ ವಿದ್ಯೆ' ಅಥವಾ ಆಧ್ಯಾತ್ಮಿಕ ವಿದ್ಯೆಗೇ ಹೆಚ್ಚಿನ ಮಹತ್ವವನ್ನು ನೀಡಲಾಗಿತ್ತು. ಆದರೆ ಅಪರಾ ವಿದ್ಯೆ ಅಥವಾ ಲೌಕಿಕ ವಿದ್ಯೆಯನ್ನು ಕಡೆಗಣಿಸಲಾಗಿರಲಿಲ್ಲ. ಹಾಗೆ ನೋಡಿದರೆ ಪ್ರಾಚೀನ ಭಾರತದಲ್ಲಿ ವೈದ್ಯಕೀಯ, ಖಗೋಳಶಾಸ್ತ್ರ, ಸಾಮಾಜಿಕ ವ್ಯವಸ್ಥೆ ಮತ್ತು ಮಾನವನ ಮನಸ್ಸು – ಇವುಗಳಲ್ಲಿ ಉನ್ನತ ಮಟ್ಟದ ಅಧ್ಯಯನ ಜರುಗಿತ್ತೆಂದು ನಮಗೆ ತಿಳಿದುಬಂದಿದೆ.

## ಇತರ ದೇಶಗಳಲ್ಲಿನ ಶಿಕ್ಷಣ ಪದ್ಧತಿ

ಚೀನಾದ ಕನ್‌ಫ್ಯೂಷಿಯಸ್ (ಕ್ರಿ.ಪೂ. ೫೫೧–೪೭೧) ಮತ್ತು ಗ್ರೀಕ್ ದೇಶದ ಪ್ಲೇಟೋ (ಕ್ರಿ.ಪೂ. ೪೨೭–೩೪೭) ಶಿಕ್ಷಣದ ಬಗೆಗಿನ ಸ್ವತಂತ್ರ ಚಿಂತನಾಕ್ಷೇತ್ರದ ಹರಿಕಾರರು ಎಂದು ನಾವು ಹೇಳಬಹುದು. ಅವರ ನಂತರ ಬಂದ ಚಿಂತಕರಲ್ಲಿ ಅರಿಸ್ಟಾಟಲ್, ಕೊಮೆನಿಯಸ್, ಅಗಸ್ಟೀನ್, ಜೀನ್ ಜಾಕ್ವೆಸ್ ರೋಸ್ಸೋ, ಹರ್ಬರ್ಟ್, ಜಾನ್ ಡ್ಯೂಯಿ ಮುಂತಾದವರು ಪ್ರಮುಖರು. ಶಿಕ್ಷಣವು ವ್ಯಕ್ತಿಯೊಬ್ಬನ ನೈತಿಕ ಚಾರಿತ್ರ್ಯದ ಬೆಳವಣಿಗೆಯನ್ನು ಸಾಧಿಸಬೇಕೆಂದು ಹರ್ಬರ್ಟ್ ಪ್ರತಿಪಾದಿಸಿದನು. ಫ್ರೊಬೆಲ್ ಎನ್ನುವ ಶಿಕ್ಷಣತಜ್ಞನು ಶಿಕ್ಷಣವು ಪಠ್ಯಕ್ರಮಕ್ಕಿಂತ ಹೆಚ್ಚಾಗಿ ಮಗುವಿನ ವ್ಯಕ್ತಿತ್ವಕ್ಕೆ ಮಹತ್ವ ನೀಡಬೇಕೆಂದು ಹೇಳಿದನು. ಅವನ ಪ್ರಕಾರ ಜ್ಞಾನವನ್ನು ಮಗುವಿನ ಮೆದುಳಿಗೆ ಸುಮ್ಮನೆ ತುಂಬಿಸಲು ಸಾಧ್ಯವಿಲ್ಲ. ಅವನ ಭಾವನೆಗಳನ್ನು ಮುಂದೆ ಬಂದ ಶಿಕ್ಷಣತಜ್ಞರು ಇನ್ನೂ ಅಭಿವೃದ್ಧಿಪಡಿಸಿದರು. ಕಡೆಯದಾಗಿ, ಅಮೆರಿಕದ ಶಿಕ್ಷಣತಜ್ಞನಾದ ಜಾನ್ ಡ್ಯೂಯಿಯು, 'ಶಿಕ್ಷಣವೆಂದರೆ ಜೀವನವೇ ಆಗಿದೆ' ಎಂಬ ಸಿದ್ಧಾಂತವನ್ನು ಮುಂದಿಟ್ಟನು. ಅವನ ಪ್ರಕಾರ ಶಿಕ್ಷಣವೆಂದರೆ, ಮಗುವಿನ ಸ್ವಭಾವ ಮತ್ತು ಸಾಮರ್ಥ್ಯಗಳು ಅನಾವರಣಗೊಳ್ಳುವ ಪ್ರಕ್ರಿಯೆಯೇ ಆಗಿದೆ. ಈ ನಮ್ಮ ಸಮೀಕ್ಷೆಯಲ್ಲಿ ಒಂದು ವಿಷಯ ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ಚಿಂತಕರು ಶಿಕ್ಷಣ ಪ್ರಕ್ರಿಯೆಯನ್ನು ವಿಶ್ಲೇಷಿಸುವುದರಲ್ಲಿ ಮತ್ತು ಶಿಕ್ಷಣವನ್ನು ಒಂದು ಸ್ವತಂತ್ರ ಸಾಮಾಜಿಕ ಚಟುವಟಿಕೆಯನ್ನಾಗಿ ರೂಪಿಸುವುದರಲ್ಲಿ ಯಶಸ್ವಿಯಾದರು. ಆದರೆ ಗ್ರೀಕ್ ನಾಗರಿಕತೆ ಮತ್ತು ಕ್ರೈಸ್ತ ಧಾರ್ಮಿಕ ಹಿನ್ನೆಲೆಯಿಂದ ರೂಪಿತವಾದ ಅವರ ಸಂಸ್ಕೃತಿಯು, ಮಾನವನ ಸರ್ವತೋಮುಖ ಬೆಳವಣಿಗೆಯನ್ನು, ಅಂದರೆ ಮಾನವ ವ್ಯಕ್ತಿತ್ವದ ಎಲ್ಲ ಮೂರು ಆಯಾಮಗಳ (ದೇಹ, ಮನಸ್ಸು, ಆತ್ಮ) ಬೆಳವಣಿಗೆಯ ಪರಿಪೂರ್ಣ ದೃಷ್ಟಿಯನ್ನು ಹೊಂದುವುದರಲ್ಲಿ ಅವರು ವಿಫಲರಾಗುವಂತೆ ಮಾಡಿತು.

## ಶಿಕ್ಷಣದ ಬಗ್ಗೆ ಸ್ವಾಮಿ ವಿವೇಕಾನಂದರ ನಿಲುವು

ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ಶೈಕ್ಷಣಿಕ ವಿಚಾರಗಳ ಮಹತ್ವ ಮತ್ತು ಶ್ರೇಷ್ಠತೆಯನ್ನು ನಾವು ಅರ್ಥಮಾಡಿಕೊಳ್ಳಬಹುದು. ಸ್ವಾಮೀಜಿ ಇಲ್ಲಿ ದೊಡ್ಡ ಜಿಗಿತವನ್ನೇ ಕೈಗೊಳ್ಳುತ್ತಾರೆ. ಅವರ ಶೈಕ್ಷಣಿಕ ತತ್ತ್ವವು ಮಾನವನ ಉನ್ನತ ಆಧ್ಯಾತ್ಮಿಕ ಆಯಾಮದ ಮೇಲೆ ಆಧರಿಸಿದೆ. ಮಾನವನು ನಿಜವಾಗಲೂ ದಿವ್ಯಸ್ವರೂಪನು ಮತ್ತು ಹೀಗಾಗಿ ಅವನು ಪರಿಪೂರ್ಣತೆ, ಅನಂತ ಜ್ಞಾನ ಮತ್ತು ಸಾಮರ್ಥ್ಯಗಳ ಗಣಿಯಾಗಿದ್ದಾನೆ ಎನ್ನುವುದನ್ನು ಈ ತತ್ತ್ವವು ಖಾತರಿಪಡಿಸುತ್ತದೆ. ಯಾವುದೇ ಒಂದು ಶೈಕ್ಷಣಿಕ ವ್ಯವಸ್ಥೆಯು ಮಾನವನಲ್ಲಿ ಈಗಾಗಲೇ ಅಂತರ್ಗತವಾಗಿರುವ ಈ ದಿವ್ಯತೆಯ, ಪರಿಪೂರ್ಣತೆಯ, ಜ್ಞಾನದ ಮತ್ತು ಸಾಮರ್ಥ್ಯದ ಕ್ರಮಬದ್ಧ ಅಭಿವ್ಯಕ್ತಿಗೆ ಅವಕಾಶಗಳನ್ನು ಒದಗಿಸಿಕೊಡಬೇಕು; ಹಾಗೆಯೇ ಅದಕ್ಕೆ ಸರಿಯಾದ ವಾತಾವರಣವನ್ನು ನಿರ್ಮಾಣ ಮಾಡಿಕೊಡಬೇಕು. ಸ್ವಾಮಿ ವಿವೇಕಾನಂದರ ಶೈಕ್ಷಣಿಕ ಚಿಂತನೆಗಳು ವೇದಾಂತದ ಆತ್ಮತತ್ತ್ವದಲ್ಲಿ ಆಳವಾಗಿ ಬೇರೂರಿವೆ ಹಾಗೂ ಇದರ ಫಲಶ್ರುತಿಯಾಗಿ, ಮಾನವ ವ್ಯಕ್ತಿತ್ವದ ತ್ರಿರೂಪ ಸ್ವಭಾವವನ್ನು (ಆತ್ಮ, ಮನಸ್ಸು, ದೇಹ – ಈ ಮೂರು ಆಯಾಮಗಳು ಮನುಷ್ಯನಲ್ಲಿ ಇವೆ ಎಂಬ ಪರಿಕಲ್ಪನೆ) ಗಣನೆಗೆ ತೆಗೆದುಕೊಳ್ಳುತ್ತದೆ.

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ನೆನಪಿನಲ್ಲಿಡಬೇಕು. ಶಿಕ್ಷಣದ ಬಗ್ಗೆ ಮಾತನಾಡುವಾಗ, ಭಾರತದ ಜನಸಾಮಾನ್ಯರನ್ನು ಸ್ವಾಮೀಜಿ ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದರು. ಭಾರತೀಯ ಜನಸಾಮಾನ್ಯರನ್ನು ಮೇಲೆತ್ತುವ ಬಹುತೇಕ ವಿದೇಶಿ ವಿಧಾನಗಳು ಭಾರತದ ಸಂದರ್ಭಕ್ಕೆ ಸೂಕ್ತವಾಗುವುದಿಲ್ಲ. ಇಲ್ಲಿ ಸ್ವಾಮಿ ವಿವೇಕಾನಂದರ ಮಹತ್ವವನ್ನು ನಾವು ಗುರುತಿಸಬೇಕು. ಭಾರತದ ಅತಿಮುಖ್ಯ ಸಮಸ್ಯೆಯೆಂದರೆ ಜನಸಾಮಾನ್ಯರನ್ನು ಮೇಲೆತ್ತುವುದು ಎಂದು ಮುಕ್ತವಾಗಿ ಘೋಷಿಸಿದ ಪ್ರಪ್ರಥಮ ಧಾರ್ಮಿಕ ಮುಖಂಡರೆಂದರೆ ಸ್ವಾಮಿ ವಿವೇಕಾನಂದರೇ ಎಂದು ಹೇಳಬೇಕು. ಸ್ವಾಮೀಜಿಯವರು ಪ್ರತಿಪಾದಿಸಿದ ಜನಸಾಮಾನ್ಯರ ಏಳ್ಗೆಯ ವಿಧಾನವು ಭಾರತೀಯ ಸಂಸ್ಕೃತಿಗೆ ಅನುಗುಣವಾದದ್ದು. ಇದರ ಪ್ರಾಯೋಗಿಕ ವಿಧಾನವು ಶಿಕ್ಷಣದ ಮೇಲೆಯೇ